■ ಹನಿ



# ಮೂರ್ತಿ ಚಿಕ್ಕದಾದರೂ..

ಇನ್‌ಫೋಸಿಸ್ ಟೆಕ್ನಾಲಜೀಸ್ ಸಂಸ್ಥೆಯ ಸ್ಥಾಪಕ, ನಾಗವಾರ ರಾಮದಾಸ ನಾರಾಯಣಮೂರ್ತಿ (ಎನ್.ಆರ್.ನಾರಾಯಣ ಮೂರ್ತಿ) ಸುದ್ದಿಗೆ ಗ್ರಾಸವಾಗಿದ್ದಾರೆ. ಬೆಳಗಾವಿಯಲ್ಲಿ ನಡೆಯಲಿರುವ ವಿಶ್ವ ಕನ್ನಡ ಸಮ್ಮೇಳನ ಉದ್ಘಾಟಿಸಲು ಮೂರ್ತಿಯವರನ್ನು ಸರಕಾರ ಆಹ್ವಾನಿಸಿದ್ದನ್ನು ಕನ್ನಡ ಹೋರಾಟಗಾರರು ವಿರೋಧಿಸಿದ್ದಾರೆ. 'ರಾಜ್ಯದಲ್ಲಿ ಒಂದನೇ ತರಗತಿಯಿಂದ ಕನ್ನಡ ಮಾಧ್ಯಮದ ಅನುಷ್ಠಾನವನ್ನು ವಿರೋಧಿಸಿದ, ದೊಡ್ಡ ಸಾಫ್ಟ್‌ವೇರ್ ಕಂಪೆನಿ ಮಾಲೀಕರಾದರೂ ಕನ್ನಡ ತಂತ್ರಾಂಶದ ಅಭಿವೃದ್ಧಿಗೆ ಕಿಂಚಿತ್ತೂ ನೆರವಾಗದ, ಬೆಂಗಳೂರನ್ನು ಕೇಂದ್ರಾಡಳಿತ ಪ್ರದೇಶ ಆಗಬೇಕೆಂದು ಆಗ್ರಹಿಸಿದ ನಾರಾಯಣಮೂರ್ತಿಯವರು ಕನ್ನಡ ಸಮ್ಮೇಳನ ಉದ್ಘಾಟಿಸಲು ಸೂಕ್ತ ಆಯ್ಕೆ ಅಲ್ಲ' ಎನ್ನುವುದು ಹೋರಾಟಗಾರರ ವಾದ. 'ಇನ್‌ಫೋಸಿಸ್ ನೂರಾರು ಕೋಟಿ ರೂಪಾಯಿಗಳ ತೆರಿಗೆ ತಪ್ಪಿಸಿದೆ' ಎಂಬ ವರದಿಯೂ ಇದೇ ಸಂದರ್ಭದಲ್ಲಿ ಪ್ರಕಟವಾಗಿದೆ. 'ಐಟಿ ಕನ್ನಡಿಗರ' ಮಟ್ಟಿಗೆ ಮೂರ್ತಿ, 'ಮಹಾಪುರುಷ'ರಂತೆ ಕಂಡರೂ, ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದ ಮುಖಂಡರು ಮೂರ್ತಿಯವರ ಕನ್ನಡವಿರೋಧಿ ಧೋರಣೆಯನ್ನು ಬಯಲಿಗೆಳೆದಿದ್ದಾರೆ.

ಉದ್ಯಮಿಯಾಗಿ ನಾರಾಯಣಮೂರ್ತಿ (ಬರ್ತ್‌ಡೇ 20-8-1946) ಜಾಗತಿಕ ಮನ್ನಣೆ ಪಡೆದವರು. ತಂತ್ರಾಂಶ ಸೇವೆಗೆ ಅವರು ಸ್ಥಾಪಿಸಿದ ಇನ್‌ಫೋಸಿಸ್ ಕಂಪೆನಿ ಜಾಗತಿಕ ಪ್ರತಿಷ್ಠೆ ಹೊಂದಿದೆ. ವಿಶ್ವಮಟ್ಟದ ಕಂಪೆನಿಯಾಗಿ ರೂಪಿಸುವಲ್ಲಿ ಮೂರ್ತಿಯವರ ದೂರದರ್ಶಿತ್ವ ಸಾಟಿಯಿಲ್ಲದ್ದು. ಮೈಸೂರಿನ ಎನ್‌ಐಇ ಕಾಲೇಜಲ್ಲಿ ಬಿಇ ಡಿಗ್ರಿ ಪಡೆದು, ಕಾನ್ಪುರ ಐಐಟಿ ಯಲ್ಲಿ ಎಂಟೆಕ್ ಮಾಡಿದ ನಾರಾಯಣ ಮೂರ್ತಿ, ಮೊದಲು ಕೆಲಸಕ್ಕೆ ಸೇರಿದ್ದು ಅಹ್ಮದಾಬಾದ್‌ನ ಐಐಎಂ ನಲ್ಲಿ ಸಿಸ್ಟಂ ಪ್ರೋಗ್ರಾಮರ್ ಆಗಿ. ಆ ಬಳಿಕ ಪುಣೆಯ ಪಟ್ನಿ ಕಂಪ್ಯೂಟರ್ ಸಿಸ್ಟಮ್ಸ್‌ಗೆ ಸೇರ್ಪಡೆ. ಅಲ್ಲೇ ಸುಧಾ ಮೂರ್ತಿಯವರ ಪರಿಚಯ. ಸ್ನೇಹ, ಮದುವೆ.

1981ರಲ್ಲಿ ಮೂರ್ತಿಯವರು ಇನ್‌ಫೋಸಿಸ್ ಸಂಸ್ಥೆಗೆ ಹೂಡಿದ್ದು 250 ಡಾಲರ್. ಅದರಲ್ಲೂ ದೊಡ್ಡ ಭಾಗ ಸುಧಾ ಮೂರ್ತಿ ನೀಡಿದ ಸಾಲದ್ದು. ಇತರ ಆರು ಮಂದಿ ಎಂಜಿನಿಯರ್‌ಗಳಿಗೆ ಜತೆಗೂಡಲು ಆಹ್ವಾನ ನೀಡಿದ ಮೂರ್ತಿ ಸಂಸ್ಥೆಯ ಸಿಇಓ ಆದರು. ಅಲ್ಲಿಂದಾಚೆ ಯಶಸ್ಸಿನ ಓಟ. ವಿದೇಶಗಳಲ್ಲಿ ಕಾಲು ಚಾಚಿತು. ಷೇರುಪೇಟೆ ಪ್ರವೇಶಿಸಿತು. ಅಮೆರಿಕದ ನಾಸ್ಡಾಕ್‌ನಲ್ಲಿ ಲಿಸ್ಟ್ ಆದ ಮೊದಲ ಭಾರತೀಯ ಕಂಪೆನಿ ಎನ್ನಿಸಿಕೊಂಡಿತು. ಮೂರ್ತಿ ಹಲವು ಜಾಗತಿಕ ಪ್ರಶಸ್ತಿಗಳನ್ನೂ ಗೆದ್ದುಕೊಂಡರು. ಪದ್ಮಶ್ರೀ, ಪದ್ಮವಿಭೂಷಣ ಎಲ್ಲವೂ ಮಡಿಲಿಗೆ ಬಿದ್ದವು. 60ನೇ ವಯಸ್ಸಿಗೇ ನಿವೃತ್ತಿ ಎಂದು ಘೋಷಿಸಿದ ಮೂರ್ತಿ ನುಡಿದಂತೆ ನಡೆದರು. 21 ವರ್ಷಗಳ ಕಾಲ ಕಂಪೆನಿಯ ಸಿಇಓ- ಚೇರ್‌ಮನ್ ಆಗಿದ್ದ ಅವರು 2002ರಲ್ಲಿ ನಿವೃತ್ತಿಯಾದರು. 2006ರಿಂದ ಅವರು ಸಂಸ್ಥೆಯ 'ನಾನ್ ಎಕ್ಸಿಕ್ಯೂಟಿವ್ ನಿರ್ದೇಶಕ'ರಾಗಷ್ಟೇ ಉಳಿದಿದ್ದಾರೆ. ಇತ್ತೀಚೆಗೆ ಅವರು ಸ್ಥಾಪಿಸಿರುವ 'ಕ್ಯಾಟಮಾರನ್ ವೆಂಚರ್ ಫಂಡ್' ಹೊಸ ಉದ್ಯಮಿಗಳ ಪ್ರೋತ್ಸಾಹಕ್ಕೆ ನಿಂತಿದೆ. ತಮ್ಮಲ್ಲಿದ್ದ 8 ಲಕ್ಷ ಇನ್‌ಫಿ ಷೇರುಗಳನ್ನು ಮಾರಿ 174 ಕೋಟಿ ರೂಪಾಯಿ ಕೂಡಿಸಿದರು. ಪತ್ನಿ ಸುಧಾ ತಮ್ಮಲ್ಲಿದ್ದ ಇನ್‌ಫಿ ಷೇರುಗಳ ಪೈಕಿ ಕಾಲುಭಾಗದಷ್ಟನ್ನು ಮಾರಿ 430 ಕೋಟಿ ರೂಪಾಯಿ ಸಂಗ್ರಹಿಸಿ ನೀಡಿದರು. ಈ ದಂಪತಿಗೆ ಇಬ್ಬರು ಮಕ್ಕಳು. ಮಗಳು ಅಕ್ಷತಾ ರಿಶಿ ಸುನಾರ್‌ರನ್ನು ಮದುವೆಯಾಗಿದ್ದಾಳೆ. ಮಗ ರೋಹನ್‌ಗೆ ಟಿವಿಎಸ್ ಕಂಪೆನಿಯ ವೇಣು ಶ್ರೀನಿವಾಸನ್ ಮಗಳ ಜತೆ ನಿಶ್ಚಿತಾರ್ಥ ಆಗಿದೆ. ನೆಮ್ಮದಿಯ ಈ ದಿನಗಳಲ್ಲಿ 'ಕನ್ನಡದ ವಿವಾದ' ಮೂರ್ತಿಯವರಿಗೆ ಬೇಕಿತ್ತೆ?

# ಛಲಗಾತಿ ಸೆರೆನಾ



ಟೆನಿಸ್‌ಲೋಕದ ಧ್ರುವತಾರೆ ಸೆರೆನಾ ವಿಲಿಯಮ್ಸ್‌ಗೆ ಹುಷಾರಿಲ್ಲ. ಶ್ವಾಸಕೋಶದಲ್ಲಿ ರಕ್ತಬಿಂದು ಉಂಟಾಗಿದೆಯಂತೆ. ಸರ್ಜರಿ ಮಾಡಿ ಅದನ್ನು ತೆಗೆದು ಹಾಕಲಾಗಿದೆ. ಕಳೆದ ವರ್ಷವೇ ಆಕೆಯ ಎರಡೂ ಮಂಡಿಗಳಲ್ಲಿ ನೋವು ಕಾಣಿಸಿಕೊಂಡಿತ್ತು. ಅದಕ್ಕೆ ಚಿಕಿತ್ಸೆ ನಡೆದಿತ್ತು. ನಡುವೆ ಆಕೆಯ ಮಲಸೋದರಿಯೊಬ್ಬಳು ಕೊಲೆಯಾದಳು. ಹಾಲಿವುಡ್‌ನಲ್ಲಿ ನಟಿಸಲು ಹೋಗಿ ಅಲ್ಲಿಯೂ ನೋವು ತಿಂದಳು ಸೆರೆನಾ. ಹಲವಾರು ವರ್ಷಗಳಿಂದ ಕೀರ್ತಿಶಿಖರದಲ್ಲಿ ಮೆರೆದ ಸೆರೆನಾಗೆ ಇದು ನಿಜಕ್ಕೂ ಕಷ್ಟಕಾಲ. ಕಳೆದ ವರ್ಷದ ಜುಲೈನಿಂದ ಆಕೆ ಸ್ಪರ್ಧಾತ್ಮಕ ಟೆನಿಸ್‌ನಲ್ಲಿ ಆಡಿಯೇ ಇಲ್ಲ. ಮತ್ತೀಗ ವಿಂಬಲ್ಡನ್ ಸೀಸನ್ ಬರುತ್ತಿದೆ. ಅದರ ಬೆನ್ನಲ್ಲೆ ಅಮೆರಿಕನ್ ಓಪನ್ ಆರಂಭವಾಗಲಿದೆ. ಸೆರೆನಾ ಆಡುತ್ತಾಳೊ ಇಲ್ಲವೊ ಎಂಬ ಆತಂಕ ಅಭಿಮಾನಿಗಳದ್ದು.

ಸೆರೆನಾ ಛಲಗಾತಿ. (ಬರ್ತ್‌ಡೇ 26-9-1981) ಎಲ್ಲ ಗಾಯಗಳನ್ನೂ ಗುಣಪಡಿಸಿಕೊಂಡು ಆಕೆ ಆಗಸ್ಟ್‌ನಲ್ಲಿ ನಡೆಯಲಿರುವ ವಿಂಬಲ್ಡನ್‌ಗೆ ಸಿದ್ಧಳಾಗುತ್ತಾಳೆ ಎಂಬ ಮಾತಿದೆ. ಐದರ ಎಳೆಯದಲ್ಲೇ ಟೆನಿಸ್ ಆಟ ಶುರು ಮಾಡಿದವಳು ಸೆರೆನಾ. ಮಿಚಿಗನ್‌ನಲ್ಲಿ ಹುಟ್ಟಿದ ಈಕೆಗೆ ಮತ್ತು ಈಕೆಯ ಸೋದರಿ ವೀನಸ್‌ಗೆ ತಂದೆ- ತಾಯಿಯೇ ಕೋಚ್ ಆಗಿದ್ದರು. ಆ ಬಳಿಕ ತಜ್ಞ ಕೋಚ್ ನೆರವು ಸಿಕ್ಕಿದರೂ, ಅಮೆರಿಕದಲ್ಲಿ ಆಫ್ರಿಕನ್ ಮೂಲದ ಕಪ್ಪು ಹುಡುಗಿಯರು ಎದುರಿಸಬೇಕಾದ ಜನಾಂಗೀಯ ಬೇಧದ ಕಹಿರುಚಿ ಉಂಡವಳೀಕೆ. ಅದಕ್ಕೆಂದೇ 10ರ ಹರೆಯದಲ್ಲಿ ಟೆನಿಸ್ ಅಭ್ಯಾಸವನ್ನೂ ಆಕೆಯ ಅಪ್ಪ ನಿಲ್ಲಿಸಿದ್ದ. ಆದರೆ ಸ್ಪರ್ಧೆಯ ಛಲ ಆಕೆಯನ್ನು ಮುಂದಕ್ಕೆ ಕರೆತಂದಿತು. 2002ರಲ್ಲಿ ಮೊದಲ ಬಾರಿ ವೃತ್ತಿಪರ ಟೆನಿಸ್‌ನ ವಿಶ್ವ ನಂಬರ್ ಒನ್ ಆದ ಈಕೆ, 2009ರವರೆಗೆ ಐದು ಬಾರಿ ಈ ಸಾಧನೆಯನ್ನು ಪುನರಾವರ್ತಿಸಿದ್ದಾಳೆ. ಒಟ್ಟು 13 ಸಿಂಗಲ್ಸ್ ಕಿರೀಟ ಮುಡಿಗೇರಿದೆ. 27 ಗ್ರ್ಯಾನ್‌ಸ್ಲಾಮ್ ಗೆದ್ದವಳು. ಏಕಕಾಲಕ್ಕೆ ನಾಲ್ಕು ಗ್ರ್ಯಾನ್‌ಸ್ಲಾಮ್ ಗೆದ್ದ ವಿಶ್ವದ ಐದನೇ ಮಹಿಳೆ. ಜಗತ್ತಿನಲ್ಲೇ ಅತ್ಯಧಿಕ ಹಣ ಗಳಿಸುತ್ತಿರುವ ಮಹಿಳಾ ಅಥ್ಲೀಟ್.

ಸದ್ಯಕ್ಕೆ ಸೆರೆನಾ ವಿಶ್ವದ ನಂಬರ್ 12ನೇ ಆಟಗಾರ್ತಿ. 10 ತಿಂಗಳಿಂದ ಟೆನಿಸ್ ಆಡದಿದ್ದುದೂ ಅದಕ್ಕೊಂದು ಕಾರಣ. ಆದರೆ ಡಬಲ್ಸ್‌ನಲ್ಲಿ ಈಕೆ ಮತ್ತು ಸೋದರಿ ಈಗಲೂ ವಿಶ್ವದ ನಂಬರ್ 2 ಆಟಗಾರ್ತಿಯರು. ಸತತ ಸರ್ವಿಸ್ ಸಾಮರ್ಥ್ಯ, ಬಲಶಾಲಿ ಹಿಂಗೈ- ಮುಂಗೈ ಗ್ರೌಂಡ್‌ಸ್ಟ್ರೋಕ್, ಭರ್ಜರಿ ಡ್ರೈವ್ ವೋಲಿ- ಈಕೆಯ ಪ್ಲಸ್‌ಪಾಯಿಂಟ್‌ಗಳು. ಸೆರೆನಾ ಫೀನಿಕ್ಸ್‌ನಂತೆ ಎದ್ದು ಬರುವ ನಿರೀಕ್ಷೆ ಎಲ್ಲರದ್ದು.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65